ಕ್ರಿಮಿನಲ್ ಮೀಸ್ 72/20224

ಪಿ.ಡಬ್ಲ್ಯೂ: 01

**ದಿನಾಂಕ: 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ಎದುರದಾರರ ಪರ ಶ್ರೀ. ಕೆ.ಹೆಚ್.ಹೆಚ್. ವಕೀಲರಿಂದ:**

7. ನನ್ನ ಮದುವೆಯ ಸಮಯದಲ್ಲಿ ನಾನು ಪ್ರಥಮ ಪಿ.ಯು.ಸಿ. ಮುಗಿಸಿರುತ್ತೇನೆ. ನನ್ನ ತಂದೆ-ತಾಯಿಗೆ ನಾನು ಒಬ್ಬಳೆ ಮಗಳು ಎಂದರೆ ಸರಿ. ನಾನು ಮೊದಲನೆ ಬಾರಿ ಗರ್ಭಿಣಿ ಆದಾಗ ಎದುರುದಾರ ಬೆಂಗಳೂರಿನಲ್ಲಿ ಆಸ್ಪತ್ರೆಯಲ್ಲಿ ತೋರಿಸಿರುತ್ತಾನೆ ಎಂದರೆ ಸರಿ. ಆಸ್ಪತ್ರೆಯಲ್ಲಿ ತೋರಿಸಿದಾಗ ನನಗೆ ವಿಶ್ರಾಂತಿ ಪಡೆದುಕೊಳ್ಳಬೇಕೆಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ದೂರನ ಪ್ರಯಾಣ ಮಾಡಬಾರದು ಎಂದು ನನ್ನ ಗಂಡನು ನನ್ನನ್ನು ಕರೆದುಕೊಂಡು ವಿಮಾನದಿಂದ ಊರಿಗೆ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿ. ನಾನು ನನ್ನ ಗಂಡನಿಗೆ ತವರುಮನೆಗೆ ಹೋಗುತ್ತೇನೆ ಎಂದು ಕಿರಿಕಿರಿ ಮಾಡಿದ ಕಾರಣ ವಿಮಾನದ ಮೂಲಕ ನನ್ನ ತವರುಮನೆಗೆ ಬಿಟ್ಟುಹೋಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬಾಗೇವಾಡಿಗೆ ವರ್ಗಾವಣೆ ಪಡೆದುಕೊಳ್ಳಿ ಎಂದು ಕಿರುಕುಳ ನೀಡಿರುತ್ತೇನೆ ಎಂದರೆ ಸರಿಯಲ್ಲ.

8. ಬೆಂಗಳೂರದಿಂದ ನನ್ನ ಗಂಡನ ಮನೆಗೆ ಬಂದ ನಂತರ 4-5 ದಿನಗಳು ಮಾತ್ರ ಇದ್ದೇನು. ನನ್ನ ಅತ್ತೆ-ಮಾವನ ಜೊತೆ ತವರುಮನೆಗೆ ಹೋಗುತ್ತೇನೆ ಎಂದು ಕಿರುಕುಳ ಮಾಡಿದ್ದರಿಂದ ನನ್ನ ತವರುಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನು ಕಾರು ಮಾಡಿ ತವರುಮನೆಗೆ ಕಳುಹಿಸಿಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ನನಗೆ ನೀನು ಬೇಡ ಡಿವೈರ್ಸ ಕೊಡು ಎಂದು ಹೇಳಿ ನನಗೆ ಗಾಡಿಯಲ್ಲಿ ಕಳುಹಿಸಿಕೊಟ್ಟಿರುತ್ತಾರೆ. ಎದುರುದಾರನು ಕಿರುಕುಳ ನೀಡಿರುತ್ತಾನೆ ಎಂದು ಅದೇ ದಿನ ದೂರನ್ನು ಸಲ್ಲಿಸಿರುವುದಿಲ್ಲ. ನನ್ನ ಅರ್ಜಿಯಲ್ಲಿ ಎದುರುದಾರನ್ನು ಡಿವೈರ್ಸ ಕೊಡು ಎಂದು ಕಿರುಕುಳ ಮಾಡುತ್ತಿದ್ದಾನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಅರ್ಜಿಯಲ್ಲಿ ನಮೂದಿಸಿರುವುದಿಲ್ಲ. ನನ್ನ ಅತ್ತೆ-ಮಾವ ಮತ್ತು ನನ್ನ ಗಂಡ ಒಳ್ಳೆ ರೀತಿಯಿಂದ ನೋಡಿಕೊಳ್ಳುತ್ತಿದ್ದರು ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

9. ತವರುಮನೆಗೆ ಬಿಟ್ಟು ಹೋದ ನಂತರ ನನ್ನ ಗಂಡ 4-5 ತಿಂಗಳು ಬಂದಿರುವುದಿಲ್ಲ. ಬೆಂಗಳೂರಿಗೆ ನನ್ನ ಗಂಡನು ಹೋಗಿರುತ್ತಾನೆ ಎಂದರೆ ಸಾಕ್ಷಿಯು ನನ್ನ ತಂದೆ-ತಾಯಿ

ಕರೆದುಕೊಂಡು ಹೋಗಿ ಬಿಟ್ಟುಬಂದಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರನು ನನ್ನನ್ನು ಕರೆಯಲು ತವರುಮನೆಗೆ ಬಂದಾಗ ನಾನು ತವರುಮನೆಯಲ್ಲಿ ಇರುತ್ತೇನೆ ಎಂದು ಕಿರಿಕಿರಿ ಮಾಡಿದ್ದು, ನನಗೆ ಬುದ್ಧಿವಾದ ಹೇಳಿ ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ.

10. ಬೆಂಗಳೂರಿಗೆ ಹೋದ ನಂತರ 1 ತಿಂಗಳು ಮಾತ್ರ ಚನ್ನಾಗಿದ್ದೇವು. ಬೆಂಗಳೂರಿಗೆ ಬಂದ ನಂತರ ಸಹ ಎದುರುದಾರನ ಜೊತೆ ಕಿರುಕುಳ ಮಾಡಿ ತವರುಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಎದುರುದಾರನು ರೈಲ್ವೆ ಮೂಲ ತವರುಮನೆಗೆ ಬಂದಿರುತ್ತೇವೆ ಎಂದರೆ, ಸಾಕ್ಷಿಯು ರೈಲ್ವೆ ಸ್ಟೇಷಗೆ ಬಿಟ್ಟುಹೋಗಿರುತ್ತಾನೆ ಎಂದು ನುಡಿಯುತ್ತಾರೆ.

11. ಬೆಂಗಳೂರಿನಿಂದ ಇಂಡಿಗೆ ಹೋಗುವಾಗ ಎದುರುದಾರನಿಗೆ ಗೊತ್ತಾಗದ ಹಾಗೆ ಬಾಗೇವಾಡಿಗೆ ಇಳಿದು ತವರುಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರದಾರನು ಹಾಗೂ ಆತನ ತಂದೆ-ತಾಯಿ ಸಾಕಷ್ಟು ಬಾರಿ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದರು ಸಹ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹೆರಿಗೆ ಆದ ನಂತರ ನಾನು ಆಸ್ಪತ್ರೆಯಲ್ಲಿ ಇರುವಾಗ ಎದುರುದಾರ ಮತ್ತು ಅವರ ಕುಟುಂಬದವರು ನೋಡಲು ಬಂದರೆ ಸರಿಯಾಗಿ ಮಾತನಾಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಮೊದಲು ಮಗು ಜನಿಸಿದೆ ಎಂದು ತನ್ನ ಮನೆಗೆ ಕರೆದುಕೊಂಡು ಹೋಗಿ ಕಾರ್ಯಕ್ರಮ ಮಾಡಿರುತ್ತಾನೆ ಎಂದರೆ ಸರಿ. ನಂತರ ನನ್ನ ತಂದೆ-ತಾಯಿಯರು ಜಗಳ ಮಾಡಿ ನನ್ನನ್ನು ಗಂಡನ ಮನೆಯಿಂದ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರು ನನ್ನ ತಂದೆ-ತಾಯಿ ಜೊತೆ ಜಗಳ ಮಾಡಿ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

12. ಎದುರುದಾರನು ಹಾಗೂ ಕುಟುಂಬದವರು ಸಾಕಷ್ಟು ಬಾರಿ ಕರೆಯಲು ಬಂದಿದ್ದರು ಸಹ ನಾನು ಗಂಡನ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾ ಪಂಚಾಯಿತಿ ಮಾಡಿ ಎದುರುದಾರನು ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ ಎಂದರೆ, ಸಾಕ್ಷಿಯು ನನ್ನ ಅತ್ತೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

ಕ್ರಿಮಿನಲ್ ಮೀಸ್ 72/20224
ಪಿ.ಡಬ್ಲ್ಯೂ: 01

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)
ದಿವಾಣಿ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿಗಳು
ಬಸವನ ಬಾಗೇವಾಡಿ.